

# ಸೂಪರ್ ತಾರೆಯರ ಜಂಗೀಕುಸ್ತಿ

ಹೃತಿಕ್ ರೋಶನ್ ಮತ್ತು ಕಂಗನಾ ನಡುವಣ ಕೋಳಿಜಗಳಕ್ಕೆ ಎರಡು ವರ್ಷಗಳ ಇತಿಹಾಸವಿದೆ. ಒಂದು ಕಾಲದಲ್ಲಿ 'ಕ್ರಿಷ್' ಮತ್ತು 'ಕ್ರಿಷ್ 3' ಚಿತ್ರದಲ್ಲಿ ಒಟ್ಟಿಗೇ ನಟಿಸಿ ಗಳಸ್ಯ ಕಂಠಸ್ಯ ಗೆಳೆತನ ಹೊಂದಿದ್ದ ಈ ಇಬ್ಬರೂ 2017ರಲ್ಲಿ ಅದ್ಯಾವ ಗಳಿಗೆಯಲ್ಲಿ ದುಷ್ಮನ್‌ಗಳಾದರೋ, ಅಂದಿನಿಂದ ಶರಂಪರ ಜಗಳ ಮುಂದುವರಿದಿದೆ. ಪದೇಪದೆ ಟ್ವೀಟ್ ಯುದ್ಧಗಳು ಇಬ್ಬರ ನಡುವೆ ನಡೆಯುತ್ತಲೇ ಇವೆ. ಕಳೆದ ವರ್ಷ ಈ ಟ್ವೀಟ್ ಯುದ್ಧದ ಪರಿಣಾಮವಾಗಿ ಇಬ್ಬರೂ ಲಾಯರ್ ನೋಟಿಸ್ ಕಳಿಸಿದ್ದಾರೆ. ಈ ಮಧ್ಯೆ ಇಬ್ಬರ ಸಿನಿಮಾಗಳ ಬಿಡುಗಡೆಯೂ ಈ ಯುದ್ಧದ ಭಾಗವೆಂಬಂತೆ ನಡೆದಿದೆ.

ಕಂಗನಾ ನಟಿಸಿದ, ನಿರ್ದೇಶಿಸಿದ 'ಮಣಿಕರ್ಣಿಕಾ' ಬಿಡುಗಡೆಯ ದಿನಾಂಕ ಕೆಲವು ತಿಂಗಳ ಹಿಂದೆ ಫಿಕ್ಸ್ ಆದಾಗ ಹೃತಿಕ್ ಬೆಚ್ಚಿಬಿದ್ದಿದ್ದ. ಏಕೆಂದರೆ ಅವನು ನಟಿಸಿದ ಬಹುನಿರೀಕ್ಷೆಯ 'ಸೂಪರ್ 30' ಸಿನಿಮಾ ಕೂಡಾ ಅದೇ ದಿನ ಬಿಡುಗಡೆ ಆಗಬೇಕಿತ್ತು. ಬುದ್ಧಿವಂತಿಕೆ ಪ್ರದರ್ಶಿಸಿದ ಹೃತಿಕ್ ಸದ್ದಿಲ್ಲದೆ ತನ್ನ ಸಿನಿಮಾದ ಬಿಡುಗಡೆ ದಿನಾಂಕವನ್ನು ಮುಂದೂಡಿದ. ಈ ಮಧ್ಯೆ 'ಮಣಿಕರ್ಣಿಕಾ' ಬಿಡುಗಡೆಯಾಗಿ ಭರ್ಜರಿ ಯಶಸ್ಸು ಸಂಪಾದಿಸಿತು. ಬಾಕ್ಸಾಫೀಸ್‌ನಲ್ಲೂ, ವಿಮರ್ಶಕರ ಕಡೆಯಿಂದಲೂ ಕಂಗನಾಗೆ ಮೆಚ್ಚುಗೆಯ ಮಹಾಪೂರವೇ ಬಂತು.

'ಸೂಪರ್ 30' ಸಿನಿಮಾ ಭಾರತದ ಖ್ಯಾತ ಗಣಿತಜ್ಞ ಆನಂದ್ ಕುಮಾರ್‌ನ ಜೀವನವನ್ನು ಆಧರಿಸಿದೆ. ಈ ಚಿತ್ರದ ಬಗ್ಗೆ ಬಹಳ ಕುತೂಹಲವೂ ಇದೆ. ಜುಲೈ 26ರಂದು ಈ ಚಿತ್ರದ ಬಿಡುಗಡೆ ಎಂದು ದಿನಾಂಕ ಪ್ರಕಟವಾಗಿತ್ತು. ಈ ಮಧ್ಯೆ ಏಕ್ತಾ ಕಪೂರ್ ನಿರ್ಮಾಣದ ಕಂಗನಾ ಅಭಿನಯದ 'ಮೆಂಟಲ್ ಹೈ ಕ್ಯಾ' ಚಿತ್ರ ಅದಕ್ಕೂ ಮುನ್ನ ಜೂನ್ 21ರಂದು ಬಿಡುಗಡೆಯಾಗುವುದಾಗಿ ಪ್ರಕಟಿಸಲಾಗಿತ್ತು.

ಕಳೆದ ವಾರ ಏಕ್ತಾ ಕಪೂರ್ ಹಠಾತ್ತಾಗಿ ತನ್ನ ನಿರ್ಣಯವನ್ನು ಬದಲಿಸಿದ್ದಾಳೆ. ಜೂನ್ ತಿಂಗಳಲ್ಲಿ ಬಿಡುಗಡೆಯಾಗಬೇಕಿದ್ದ 'ಮೆಂಟಲ್ ಹೈ ಕ್ಯಾ' ಚಿತ್ರದ ಬಿಡುಗಡೆಯನ್ನು ಜುಲೈ 26ಕ್ಕೆ ಮುಂದೂಡಿದ್ದಾಳೆ. ಅಂದರೆ ಹೃತಿಕ್ ಚಿತ್ರದ ಬಿಡುಗಡೆಯ ದಿನವೇ! 'ದಿನಾಂಕ ಮುಂದೂಡಲು ವಿಶೇಷ ಕಾರಣವೇನೂ ಇಲ್ಲ. ನಮ್ಮ ಮಾರುಕಟ್ಟೆ ವಿಭಾಗದವರು ಮತ್ತು ಟ್ರೇಡ್ ಎಕ್ಸ್‌ಪರ್ಟ್‌ಗಳ ಸಲಹೆ ಮೇರೆಗೆ ಮುಂದೂಡಿದ್ದೇನೆ' ಎನ್ನುವುದು ಏಕ್ತಾ ನೀಡಿರುವ ಸ್ಪಷ್ಟನೆ. ಈ ದಿನಾಂಕ ಬದಲಾವಣೆಯ ಬೆನ್ನಲ್ಲೇ ಕಂಗನಾ ಟ್ವೀಟ್‌ನಲ್ಲಿ ಏಕ್ತಾಳನ್ನು ಬಾಯ್ತುಂಬಾ ಹೊಗಳಿದ್ದಾಳೆ. 'ಪುರುಷರ ಯಜಮಾನಿಕೆಯ ಬಾಲಿವುಡ್‌ನಲ್ಲಿ ಏಕ್ತಾ ನಿಜಕ್ಕೂ ದಿಟ್ಟ ನಿರ್ಧಾರ ಕೈಗೊಂಡಿದ್ದಾಳೆ' ಎನ್ನುವುದು ಕಂಗನಾ ಶಹಬ್ಬಾಸ್‌ಗಿರಿ!

ಈ ಇಬ್ಬರು 'ಪುರುಷವಿರೋಧಿ' ಮಹಿಳೆಯರ ದಾಳಿಗೆ ಕಂಗಾಲಾಗಿರುವ ಹೃತಿಕ್ ರೋಶನ್ ಈಗ ತನ್ನ 'ಸೂಪರ್ 30' ಚಿತ್ರದ ಬಿಡುಗಡೆಯನ್ನು ಮತ್ತೆ ಮುಂದೂಡಿದ್ದಾನೆ! 'ಮಾಧ್ಯಮ ಸರ್ಕಸ್ ಅನ್ನು ತಡೆಗಟ್ಟಲು ಮತ್ತು ವೈಯಕ್ತಿಕ ಮನಕ್ಷೋಭೆ ಹಾಗೂ ಮಾನಸಿಕ ಹಿಂಸೆಯನ್ನು ತಪ್ಪಿಸಲು ಈ ಮುಂದೂಡಿಕೆಯ ನಿರ್ಧಾರ ಕೈಗೊಂಡಿದ್ದೇನೆ' ಎನ್ನುವುದು ಹೃತಿಕ್ ನೀಡಿರುವ ಕಾರಣ.

ಕಂಗನಾ ಮತ್ತು ಹೃತಿಕ್ ನಡುವಣ ಈ ಕೋಳಿಜಗಳಕ್ಕೆ 'ಸೂಪರ್ 30' ಚಿತ್ರದ ನಿರ್ಮಾಣ ಹೊಣೆ ಹೊತ್ತಿರುವ ರಿಲಯನ್ಸ್ ಎಂಟರ್‌ಟೈನ್‌ಮೆಂಟ್‌ನವರು ಹೈರಾಣಾಗಿದ್ದಾರೆ. ಈ ಮಧ್ಯೆ ಚಿತ್ರದ ನಿರ್ದೇಶನದ ವಿಷಯದಲ್ಲೂ ಗೊಂದಲವಿದೆ. ಈ ಸಿನಿಮಾದ ಶೂಟಿಂಗ್ ಮುಗಿಸಿದ್ದು ನಿರ್ದೇಶಕ ವಿಕಾಸ್ ಬೆಹ್ಲ್. ಆದರೆ ಆ ಹೊತ್ತಿಗೆ ಬಾಲಿವುಡ್‌ನಲ್ಲಿ 'ಮೀಟೂ' ಬಿರುಗಾಳಿ ಎದ್ದಿತ್ತು. ವಿಕಾಸ್ ಬೆಹ್ಲ್ ವಿರುದ್ಧ ನಟಿಯೊಬ್ಬಳು ಲೈಂಗಿಕ ಕಿರುಕುಳದ ಆರೋಪ ಹೊರಿಸಿದ್ದು ದೊಡ್ಡ ಸುದ್ದಿಯಾಗಿ, ಚಿತ್ರದ ನಿರ್ದೇಶನದಿಂದ ಆತ ಹೊರನಡೆದದ್ದೂ ಆಯಿತು. ಆ ಬಳಿಕ ಎಡಿಟಿಂಗ್ ಮತ್ತು ಪೋಸ್ಟ್ ಪ್ರೊಡಕ್ಷನ್ ಕೆಲಸವನ್ನು ಪೂರ್ತಿಗೊಳಿಸಿದ್ದು ಅನುರಾಗ್ ಕಶ್ಯಪ್. ಈತ ಸಾಜಿದ್ ಮತ್ತು ಮೋಟ್ವಾನೆ ಜೊತೆಗೆ ಈ ಚಿತ್ರಕ್ಕೆ ನಿರ್ಮಾಪಕರೂ ಹೌದು. ಈಗ ಬಿಡುಗಡೆಗೆ ಸಿದ್ಧವಾಗಿರುವ ಚಿತ್ರದಲ್ಲಿ ನಿರ್ದೇಶನದ ಕ್ರೆಡಿಟ್ ಯಾರಿಗೂ ಕೊಟ್ಟಿಲ್ಲವಂತೆ. ಹಾಗೆಂದು ರಿಲಯನ್ಸ್ ಸಂಸ್ಥೆ ಸ್ಪಷ್ಟಪಡಿಸಿದೆ.

ಒಟ್ಟಾರೆ ಹೃತಿಕ್ ಮತ್ತು ಕಂಗನಾ ನಡುವಣ ಕೋಳಿಜಗಳ ನಿಲ್ಲುವಂತೆ ಕಾಣುತ್ತಿಲ್ಲ. ಈ ವಿಷಯವನ್ನೇ ಇಟ್ಟುಕೊಂಡು ಬಾಲಿವುಡ್‌ನಲ್ಲಿ ಮಸಾಲಾ ಚಿತ್ರವೊಂದನ್ನು ನಿರ್ಮಿಸಬಹುದು ಎಂದು ಹಲವರು ನಗೆಯಾಡುತ್ತಿದ್ದಾರೆ.

■ ಬಿಂದು

